1	2	3	4
		ಮುಂಡರಗಿ	ಜಂಪ್ಲಿಶಿರೂರು
		ಶಿರಹಟ್ಟಿ	ಬನ್ನಿಕೊಪ್ಪ
24.	ಧಾರವಾಡ ಜಿಲ್ಲೆ	ಹುಬ್ಬಳ್ಳಿ	ಉಣಕಲ್
			ತಾರೀಹಾಳ
		ಧಾರವಾಡ	ನವಲೂರು
		ಕಲಘಟಗಿ	ಸುರಶೆಟ್ಟಿಕೊಪ್ಪ
		ಕುಂದಗೋಳ	ಪಶುಪತಿಹಾಳ
		ನವಲಗುಂದ	ಶಿಶುವಿನಹಳ್ಳಿ
25.	ಬಾಗಲಕೋಟೆ	ಬಾಗಲಕೋಟೆ	ಹಿರೇಮ್ಯಾಗೇರಿ
		ಮುಧ್ದೋಳ	ಇಂಗಳಗಿಯಡಹಳ್ಳಿ
		ಬೀಳಗಿ	ಅರಕೇರಿ
		ಬಾದಾಮಿ	ಕೆಲವಡಿ
		ಹುನಗುಂದ	ಕಂದಗಲ್ಲ
		ಜಮಖಂಡಿ	ಮುತ್ತೂರ
26.	ಹಾವೇರಿ		
		ಹಿರೇಕೆರೂರು	ತಡಕನಹಳ್ಳಿ
		ಹಾನಗಲ್	ಕೊಪ್ಪರಶಿಕೊಪ್ಪ
			ಹಸನಾಬಾದಿ
		ರಾಣೇಬೆನ್ನೂರು	ಕುಪ್ಪೇಲೂರು
		ಸವಣೂರು	ಹತ್ತಿಮತ್ತೂರು

560 (537) ಶ್ರೀ ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸೊರಬ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳಲ್ಲಿ ಖಾಲಿಯಿರುವ ತಜ್ಞ ವೈದ್ಯರುಗಳ ಸಂಖ್ಯೆ ಎಷ್ಟು;

ಆ) ಸಾಮಾನ್ಯ ವೈದ್ಯರುಗಳ ಹುದ್ದೆಯನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಸೊರಬ ತಾಲ್ಲೂಕಿನಲ್ಲಿರುವ ಆಸ್ಪತ್ರೆಗಳಲ್ಲಿ 2 ತಜ್ಞ ವೈದ್ಯರುಗಳ ಹುದ್ದೆ ಖಾಲಿ ಇರುತ್ತದೆ.

1) ಒಂದು ನೇತ್ರ ತಜ್ಞರು

2) ಒಂದು ಅರವಳಿಕೆ ತಜ್ಞರು

ಆ) ಸಾಮಾನ್ಯ ವೈದ್ಯರುಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. 500 ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರ ಅಧಿಸೂಚನೆಯನ್ನು ದಿನಾಂಕ: 15–5–2005 ರಂದು ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆಯ ನಂತರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದು.

561 (903) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ 3 ವರ್ಷಗಳಲ್ಲಿ ಬೀದರ್ ಜಿಲ್ಲೆಗೆ ಹೊಸದಾಗಿ ಮಂಜೂರಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರ / ಘಟಕ ಮತ್ತು ಆಸ್ಪತ್ರೆಗಳ ಸಂಖ್ಯೆ ಎಷ್ಟು; (ಗ್ರಾಮವಾರು ವಿವರಗಳನ್ನು ಒದಗಿಸುವುದು)

ಆ) ಈ ಪೈಕಿ ಎಷ್ಟು ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಇನ್ನೂ ಎಷ್ಟು ಆಸ್ಪತ್ರೆಗಳು ಕಾರ್ಯನಿರ್ವಹಿಸಬೇಕಾಗಿದೆ;

ಇ) ಈ ಆಸ್ಪತ್ರೆಗೆ ಮಂಜೂರಾಗಿರುವ ವೈದ್ಯ ಹಾಗೂ ವೈದ್ಯೇತರ ಹುದ್ದೆಗಳ ಸಂಖ್ಯೆ ಇದರ ಪೈಕಿ ಎಷ್ಟು ಹುದ್ದೆಗಳು ಖಾಲಿ ಇವೆ ಹಾಗೂ ಎಷ್ಟು ಹುದ್ದೆಗಳು ಭರ್ತಿಯಾಗಿದೆ;

ಈ) ಬಸವಕಲ್ಯಾಣ ತಾಲ್ಲೂಕಿನ ರಾಜೇಶ್ವರ ಗ್ರಾಮದ ಆಸ್ಪತ್ರೆಯಲ್ಲಿ ಯಾವ ಯಾವ ಹುದ್ದೆಗಳು ಎಷ್ಟು ದಿನಗಳಿಂದ ಖಾಲಿ ಇವೆ; ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಉ) ಜಿಲ್ಲೆಗೆ ಮಂಜೂರಾಗಿರುವ ಎಷ್ಟು ಆಸ್ಪತ್ರೆಗಳಿಗೆ ಸ್ವಂತ ಕಟ್ಟಡಗಳಿವೆ; ಎಷ್ಟು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ; ಇವುಗಳಿಗೆ ಸ್ವಂತ ಕಟ್ಟಡವನ್ನು ನಿರ್ಮಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 2003–2004 ಮತ್ತು 2004–2005ನೇ ಸಾಲಿನಲ್ಲಿ ಯಾವುದೇ ಪ್ರಾಥಮಿಕ ಆರೋಗ್ಯ ಕೇಂದ್ರ / ಘಟಕ / ಆಸ್ಪತ್ರೆಗಳನ್ನು ಹೊಸದಾಗಿ ಮಂಜೂರು ಆಗಿರುವುದಿಲ್ಲ.

2005–06ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ 4 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಿದೆ. ಅವುಗಳು (1) ನಿಟ್ಟೂರು (2) ಹಳ್ಳಿಖೇಡ್ (3) ರಾಜೇಶ್ವರ (4) ಸಂತಾಪುರ. ಇವುಗಳಲ್ಲದೆ ಬಸವ ಕಲ್ಯಾಣ ಹಾಗೂ ಔರಾದ್ ತಾಲ್ಲೂಕು ಆಸ್ಪತ್ರೆಗಳನ್ನು 50 ಹಾಸಿಗೆ ಆಸ್ಪತ್ರೆಗಳಿಂದ 100 ಹಾಸಿಗೆ ಆಸ್ಪತ್ರೆಗಳಾಗಿ ಮೇಲ್ದರ್ಜೆಗೇರಿಸಲಾಗಿದೆ.